

ಚಿತ್ರ: ಅಸದ್

ನನಗೆ ತಲೆ ಕೆಟ್ಟಿದೆ.

ಕೋಣೆಯೆ, ನಿನ್ನ ಗಾಳಿ ತಂಪಾಗಿದೆ, ಶುದ್ಧವಾಗಿದೆ, ಗಾಳಿ ಹೇಗಿರಬೇಕೋ ಹಾಗಿದೆ.
ಆದರೆ ನನಗೆ ನೆಗಡಿಯಾಗಿ ಮೂಗು ಸೋರುತ್ತಿದೆ.
ನನ್ನ ದೇಹಕ್ಕೆ ಇಂತಹ ಗಾಳಿಯನ್ನು ಸೇವಿಸಿ ಅಭ್ಯಾಸವಿಲ್ಲ.

ಕೋಣೆಯೆ, ನಿನ್ನ ಹಾಸಿಗೆ!
ಅಷ್ಟೊಂದು ವಿಧೇಯತೆಯಿಂದ ಮೃದುವಾಗಬೇಕೆ?
ಕೋಣೆಯೆ, ನಿನಗೆ ಆತ್ಮಗೌರವ ಎನ್ನುವುದು ಇಲ್ಲವೆ?
ಇರಲಿ, ಮತ್ತಷ್ಟು ಮಾತಾಡುವ.

ನಾಲ್ಕು ತಲೆದಿಂಬಿನ ಕೋಣೆಯೆ, ನನ್ನ ಕ್ರೆಡಿಟ್ ಕಾರ್ಡಿನಲ್ಲಿ ಹಣವಿಲ್ಲವೆಂದು ತಿಳಿದುಕೊಂಡು ನಿನ್ನಲ್ಲಿ ಹೆಜ್ಜೆ ಇಡುವ ಮುಂಚೆಯೇ ನಿನ್ನ ಮಿನಿಬಾರ್ ಖಾಲಿಯಾಗಿದೆ.
ಕೋಣೆಯೆ, ನಿನ್ನಲ್ಲಿರುವ ಆ ಚಾಕೋಲೆಟ್, ಪಿಸ್ತಾಗಳನ್ನು ಅಷ್ಟೊಂದು ಹಣ ತೆತ್ತು ತಿನ್ನಲು ನಾನು ಖಂಡಿತಾ ಮೂರ್ಖನಲ್ಲ.

ಕೋಣೆಯೆ, ಈಗ ಹಾಸಿಗೆಯಲ್ಲಿ ಮೈಚೆಲ್ಲುತ್ತೇನೆ. ನೀನೂ ಈಗ ಮಲಗು.
ಕೋಣೆಯೆ, ನನ್ನೆಡೆಗೆ ನೋಡುವುದನ್ನು ನಿಲ್ಲಿಸು.
ಕೋಣೆಯೆ, ಈ ಪಾರದರ್ಶಕ ಗೋಡೆ, ಬಾಗಿಲು, ಕಿಟಕಿ, ಶವರ್‌ಗಳು ದಯವಿಟ್ಟು ನನಗೊಂದಿಷ್ಟು ಖಾಸಗಿತನ ಕೊಡು.

ಕೋಣೆಯೆ, ಕೋಣೆಯೆ ಈ ಸಂಗತಿ ಕೇವಲ ನಮ್ಮಿಬ್ಬರ ಮಧ್ಯೆ ಇರಲಿ. ನಾನಂತೂ ಇಲ್ಲಿರುವ ಸೋಪು, ಶಾಂಪೂ, ಕಂಡೀಷನರ್, ಶವರ್ ಜೆಲ್, ಶವರ್ ಕ್ಯಾಪ್, ಪೆನ್ಸಿಲ್, ಪೆನ್ನು, ಖಾಲಿ ಲಕೋಟೆಗಳು, ಬರೆಯುವ ಪ್ಯಾಡು, ಚಹಾದ ಚೀಲಗಳು, ಕಾಫಿ ಪೌಡರು, ಸಕ್ಕರೆ ಪೊಟ್ಟಣಗಳು, ಮೃದು ಚಪ್ಪಲಿ ಮತ್ತು ಒಂದು ದೊಡ್ಡ ಮೆತ್ತನೆಯ ಅಸ್ಪರ್ಶಿತ ಟವೆಲನ್ನು ಒಯ್ಯುತ್ತಿದ್ದೇನೆ.

**ಜೆರ್ರಿ ಪಿಂಟೋ ಅವರ 'I Want a Poem and Other Poems' ಸಂಕಲನದಿಂದ**

